ಪರ್ವತೇಶ್ವರದ ಪವಿತ್ರ ಏಕಾಂತ ಪ್ರದೇಶದಲ್ಲಿ ಬದುಕುವ ಕನಸಿನಷ್ಟೆ ಇವೂ ಮಹತ್ವದ ಆದರ್ಶ ಎಂದು ವಾದಿಸಿದ್ದ.

ಪರ್ವತೇಶ್ವರದ ದಟ್ಟ ಕಾಡು, ಗದ್ದೆ ಬಯಲು ಮತ್ತು ಹಳೆಯ ಮನೆ ಜನಾರ್ದನನ ನೆನಪನ್ನು ಜಿನುಗಿಸಬಹುದೆಂದು ಎಲ್ಲರೂ ಗೆಲುವಾಗಿದ್ದರು. ಆದರೆ, ಜರುಗಿದ್ದೇ ಬೇರೆ. ಗಜಾನನನ ಕಾದಂಬರಿ ಓದಿನ ಪ್ರಭಾವವೊ ಏನೊ ಪುಟ್ಟ ಮಗುವಿನಂತೆ ಅವನು ತನ್ನಲ್ಲಿ ತಾನೇ ಮಾತಾಡಲು ಆರಂಭಿಸಿದ: 'ಕಟ್ಟೆಮನೆ ಹುಡುಗಿ ಮದ್ವೆ ಆಗೋದಕ್ಕೆ ಅಡ್ಡಿ ಇಲ್ವಂತೆ. ಪರ್ವತೇಶ್ವರ ಪ್ರಸಾದ ಬಿತ್ತು. ಯಮುನಾ ನಿನಗೆ ಮೊದ್ಲಿಂದಲೂ ಪರಿಚಯದವಳೇ.' 'ಈ ಜಮೀನು ನಿನಗೇ ಆಗ್ತದೆ ಅಂತ ಪರ್ವತೇಶ್ವರ ತನಗೆ ಕನಸಿನಲ್ಲಿ ಹೇಳಿದ್ದು ಸತ್ಯ ಆಯ್ತು ಎಂದು ನೀ ಹೇಳಿದ್ದು ನೆನಪುಂಟು.' 'ನೌಕರಿ ಬಿಟ್ಟು ಇಲ್ಲಿಗೆ ಬಂದು ಈಗಿಂದೀಗ ರೈತಾಪಿ ಮಾಡು ಎಂದು ಹೇಳ್ತಾ ಇಲ್ಲ. ಬರ್ಬೇಕು ಅಂತನಿಸಿದ್ರೆ ಉಳಿಯೋದಕ್ಕೆ ಒಂದು ಜಾಗ, ಅಷ್ಟೆ'. 'ಅಪ್ಪಯ್ಯ, ಪರ್ವತೇಶ್ವರ ಪೂಜೆ ಕೆಲ್ಸ ಹ್ಯಾಂಗೆ?' 'ನನ್ನ ಆಯುಷ್ಯ ಗಟ್ಟಿ ಇರುವರೆಗೆ ನಾನು ಮಾಡ್ತೆ.' 'ಪಾಂಡೇಶ್ವರನ ಗಲಾಟೆ ಸುಧಾರಿಸೋದು ಕಷ್ಟ.' 'ಅವನ ಮಾತ್ರ ನಂಬಿ ಕೆಡಬೇಡಾ.' 'ಆಯಿ ಬದುಕಿದ್ದಿದ್ರೆ ಖುಷಿ ಪಡ್ತಿದ್ಲು.' ... ಅಪ್ಪನ ಏಕಪಾತ್ರ ಅಭಿನಯವನ್ನು ಬಾಗಿಲಲ್ಲಿ ನಿಂತು ಶ್ರೀಪತಿ ದಿಗಿಲಿಂದ ನೋಡುತ್ತಿದ್ದ. ಹಿಂದೆ ಬಂದು ನಿಂತ ಯಮುನಕ್ಕ, ಅವರು ಯಾರ ಸಂಗ್ತಿ ಮಾತಾಡಿದ್ರು ಗೊತ್ತಾಯ್ತಾ? ವಿಚಾರಿಸಿದಳು. 'ಗೊತ್ತಾಯ್ತು, ನನ್ನ ಅಜ್ಜ ಅಂದ್ರೆ ಅವನಪ್ಪನ ಸಂಗ್ತಿ ಮಾತಾಡ್ತಾ ಇದ್ದ. ಕಾದಂಬರಿ ಓದಿದ್ದಕ್ಕೆ ಅರ್ಥ ಆಯ್ತು.'

'ಅಪ್ಪಯ್ಯ ಬಂದದ್ದು ಗೊತ್ತಾಗ್ಲಿಲ್ಲ ನಿಮ್ಗೆ. ಚಹಾ ಮಾಡೋದಕ್ಕೆ ಹೇಳು' ಜನಾರ್ದನ ಆದೇಶ ಹೊರಡಿಸಿ ಮಂಚಕ್ಕೆ ಮರಳಿ ಹೊರಳಿದ.

ಅಪ್ಪನ ನೆನಪಿನೊಂದಿಗೆ ಆಟವಾಡುವ ಬದಲಿಗೆ ಪರ್ವತೇಶ್ವರದ ಮನೆಗೆ ಹೋಗಿ ಉಳಿದು ಬಿಡುವುದೇ ಶ್ರೀಪತಿಗೆ ಸದ್ಯ ತೋಚಿದ ದಾರಿಯಾಗಿತ್ತು. ಶ್ರೀಪತಿ ಮದುವೆಯಾಗಲಿರುವ ಹುಡುಗಿಯನ್ನು ಅವಳಪ್ಪ ಖಂಡಗಾರಿಂದ ನೇರವಾಗಿ ಒಳದಾರಿಯಿಂದ ಪರ್ವತೇಶ್ವರಕ್ಕೆ ಕರೆತಂದು ಭೇಟಿಯಾಗುವ ಪ್ರಸ್ತಾವನೆಯನ್ನು ಗಜಾನನ ಒಪ್ಪಿದ್ದ. ಕೆನಡಾದಲ್ಲಿ ಉಳಿದವ ನೆಟ್‌ವರ್ಕ್ ಸಿಗ್ನಲ್ಲಿಗೂ ಪರದಾಡುವ ಪರ್ವತೇಶ್ವರದಲ್ಲಿಹೇಗೆಸಂಸಾರಸಾಗಿಸುತ್ತಾನೊಎಂದು ಯಮುನಕ್ಕನಿಗೆ ಆತಂಕವಾಗಿತ್ತು. ಪಣಜಿಯಲ್ಲಿದ್ದ ಅವಳಿಗೂ ಹಳ್ಳಿಯ ಬದುಕನ್ನು ಹೊಂದಿಕೊಳ್ಳುವುದು ಸರಳವಲ್ಲ ಎಂದೆನಿಸಿತ್ತು. 'ಹಳ್ಳಿಗೆ ಬಂದು ಒಂದೆರಡು ದಿನ ಉಳಿದು ಹೋಗುವಾಗ ಚೆಂದ ಅನಿಸ್ತದೆ. ಕಾಯಂ ಉಳಿವಾಗಿನ ಕಷ್ಟ ಯೋಚನೆ ಮಾಡು' ಎಂದು ಅವಳು ಮಗನಿಗೆ ಅವನ ತೀರ್ಮಾನವನ್ನು ಮರು ಪರಿಶೀಲಿಸಲು ಒತ್ತಾಯಿಸಿದ್ದಳು. 'ನನಗೆ ಮನೆ ಅಂತ ಅನ್ನೋದು ಪರ್ವತೇಶ್ವರ ಮಾತ್ರ. ಅಲ್ಲೇ ಬೇಸರವಾದ್ರೆ ಈ ಜನ್ಮದಲ್ಲಿ ಮತ್ತೆಲ್ಲೂ ನೆಮ್ಮದಿ ಸಿಗೋದಕ್ಕೆ ಶಕ್ಯವಿಲ್ಲ' ಎಂದಿದ್ದ. 'ನಿನ್ನ ತೀರ್ಮಾನ ತಪ್ಪು ಅಂತ ಅನುಭವ ಹೇಳಿದ್ರೆ ಸ್ಥಳ ಬದಲಾಯಿಸೋದಕ್ಕೆ ಅವಕಾಶ ಇದ್ದೇ ಇದೆ', ಗಜಾನನನ ಬೆಂಬಲದ ಮಾತು ಶ್ರೀಪತಿಗೆ ಆಪ್ಯಾಯಮಾನವಾಗಿತ್ತು. ಶ್ರೀಪತಿಯ ತೀರ್ಮಾನ ಮಾಸ್ತರರಿಗೆ ಈ ಕಾಲದ ಯುವಕರ ದೊಡ್ಡ ಆದರ್ಶವಾಗಿ ಕಂಡಿತ್ತು. ಅವರ ಹೊಗಳಿಕೆಗೆ, 'ನನಗೆ ಇಷ್ಟವಾದ ರೀತೀಲಿ ಬದುಕೊ ಕನಸು ಬಿಟ್ಟರೆ ಮತ್ಯಾವ ಆದರ್ಶವೂ ಇಲ್ಲ ಗುರೂಜಿ' ಎಂದಿದ್ದ.

ಕಟ್ಟೆಮನೆಯಿಂದ ಪಣಜಿಯಿಂದ ತಂದಿರಿಸಿದ್ದ ಸಾಮಾನುಗಳ ಗಂಟನ್ನು ಬಿಚ್ಚದೆ ಪರ್ವತೇಶ್ವರಕ್ಕೆ ಮಾಸ್ತರರಿಗೆ ಪರಿಚಯವಿದ್ದ ಅವರ ಶಿಷ್ಯನ ಸರಕು ಸಾಗಾಣಿಕೆ ಬಾಡಿಗೆ ಮಿನಿ ಲಾರಿಯಿಂದ ಸಾಗಿಸಿದರು. ಇಬ್ಬರು ಹಮಾಲಿಗಳನ್ನು ಉಳಿಸಿಕೊಂಡು ಶ್ರೀಪತಿ ಮತ್ತು ಗಜಾನನ ಹಳೆಮನೆಯ ಕಸಗುಡಿಸಿ ಲಾರಿಯಿಂದಿಳಿಸಿದ ಸಾಮಾನುಗಳನ್ನು ಓರಣವಾಗಿರಿಸಿ ಸಜ್ಜುಗೊಳಿಸಿದರು. ಸಿಮೆಂಟ್ ಗಿಲಾಯಿ ಮಾಡಿರದ ಚಿರೆಗಲ್ಲಿನ ಗೋಡೆಯ ಸಹಜತೆಯೇ ಶ್ರೀಪತಿಗೆ ಮೆಚ್ಚುಗೆಯಾಯಿತು. 'ದಪ್ಪನೆಯ ಬಾಗಿಲುಗಳು, ದೃಢವಾದ ಕಿಟಕಿಗಳು, ಮರದ ಹಲಗೆಯ ಹಾಸಿನ ಅಂಕಣಗಳು, ಗಟ್ಟಿಮಣ್ಣಿನ ನುಣುಪಾದ ಒಳಗಳು, ಮಳೆ-ಬಿಸಿಲಿಗೆ ಹದವಾದ ತಾಮ್ರವರ್ಣದ ಹಂಚು, ಪರ್ವತೇಶ್ವರ ಬೆಟ್ಟದಿಂದ ಬಚ್ಚಲಿಗೆ ಗುದುಕುವ ಅಬ್ಬಿಯ ತಣ್ಣನೆಯ ಸಿಹಿ ನೀರು, ಎಲ್ಲ ತನ್ನ ರುಚಿಗೆ ತಕ್ಕಂತೆ ಇವೆ' ಎಂದು ಗಜಾನನನಿಗೆ ಹೇಳಿದ. 'ಈ ಉಮೇದು ಕೊನೆ ತನಕ ಇರ್ಲಿ ಮಾರಾಯ' ಎಂದಿದ್ದ. ಕಟ್ಟೆಮನೆಯಲ್ಲಿ ಕಾಯುತ್ತಿದ್ದವರನ್ನು ಕರೆತರಲು